# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ**:- ಏಕರೂಪ ದರಪಟ್ಟಿ ಸಮಿತಿಯ ಶಿಫಾರಸ್ಸಿನನ್ವಯ ಜಲಸಂಪನ್ಮೂಲ ಇಲಾಖೆಯ ದರಪಟ್ಟಿಯನ್ನು ತಯಾರಿಸಲು ಸಮಿತಿಯನ್ನು ರಚಿಸುವ ಬಗ್ಗೆ.

****

**ಓದಲಾಗಿದೆ** :1. ಸರ್ಕಾರದ ಆದೇಶ ಸಂಖ್ಯೆ:ಜಸಂಇ 146 ಕೆಬಿಎನ್ 2017(ಭಾ-3), ದಿನಾಂಕ:23/12/2019.

2. ಪತ್ರ ಸಂಖ್ಯೆ:ಪ್ರ ಇಂ/ಜಸಂಅಸಂ/ಉ ಮತ್ತು ಮೌ ಘಟಕ/ದರಪಟ್ಟಿ/ ಸಕಾಇಂ-6/ಸಇ-3/2021-22/388-391, ದಿನಾಂಕ:4/2/2022.

**ಪ್ರಸ್ತಾವನೆ:-**

ಮೇಲೆ ಓದಲಾದ (1) ರಲ್ಲಿನ ಸರ್ಕಾರದ ಆದೇಶದಲ್ಲಿ 2018-19ನೇ ಸಾಲಿನಲ್ಲಿ ಪರಿಷ್ಕರಿಸಿದ ದರಪಟ್ಟಿಯನ್ನು ಅಳವಡಿಸುವ ಸಂಬಂಧ ಹೆಚ್ಚುವರಿ ಕಾರ್ಯದರ್ಶಿ, ಜಲ ಸಂಪನ್ಮೂಲ ಇಲಾಖೆ ರವರ ಅಧ್ಯಕ್ಷತೆಯಲ್ಲಿ ರಚಿಸಲಾಗಿದ್ದ ಸಮಿತಿಯನ್ನೇ 2019-20ನೇ ಸಾಲಿಗೂ ಮುಂದುವರೆಸಿ ಆದೇಶಿಸಲಾಗಿತ್ತು.

ಮೇಲೆ ಓದಲಾದ (2)ರ ಪತ್ರದಲ್ಲಿ ಪ್ರಧಾನ ಇಂಜಿನಿಯರ್, ಜಲ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆ ಇವರು ವಿವಿಧ ಸರ್ಕಾರಿ ಇಲಾಖೆಗಳು ತಮ್ಮ ವ್ಯಾಪ್ತಿಯಲ್ಲಿ ಬರುವ ಕಾಮಗಾರಿಗಳನ್ನು ನಿರ್ವಹಿಸಲು ತಯಾರು ಮಾಡಿರುವ ದರಪಟ್ಟಿಗಳ ದರಗಳಲ್ಲಿ ವ್ಯತ್ಯಾಸವಿರುವ ಅಂಶವು ಸರ್ಕಾರದ ಗಮನಕ್ಕೆ ಬಂದಿದ್ದು, ಎಲ್ಲಾ ಇಲಾಖೆಗಳ ದರಪಟ್ಟಿಗಳಲ್ಲಿ ಸಾಮ್ಯತೆ ತರಲು ಆರ್ಥಿಕ ಇಲಾಖೆಯ ಆದೇಶ ದಿನಾಂಕ:12/02/2019 ರಲ್ಲಿ ಶ್ರೀ ಆರ್. ಜೈಪ್ರಸಾದ್, ಪ್ರಧಾನ ಇಂಜಿನಿಯರ್ (ನಿವೃತ್ತ) ರವರ ಅಧ್ಯಕ್ಷತೆಯಲ್ಲಿ ತಾಂತ್ರಿಕ ಕಾರ್ಯನಿರತ ತಂಡವನ್ನು ರಚಿಸಲಾಗಿರುತ್ತದೆ ಎಂದು ತಿಳಿಸಲಾಗಿದೆ.

ರಾಜ್ಯವ್ಯಾಪಿ ಏಕರೂಪ ದರಪಟ್ಟಿಗೆ ತಾಂತ್ರಿಕ ಕಾರ್ಯ ತಂಡವು ರಚನೆಯಾದ ಹಿನ್ನೆಲೆಯಲ್ಲಿ ಸದರಿ ಏಕರೂಪ ದರಪಟ್ಟಿ ಸಮಿತಿಯ ತಾಂತ್ರಿಕ ಕಾರ್ಯನಿರತ ತಂಡವು ಈ ಬಗ್ಗೆ ಹಲವಾರು ಸುತ್ತಿನ ಸಭೆಗಳನ್ನು ನಡೆಸಿದ್ದು, ಚಾಲ್ತಿಯಲ್ಲಿದ್ದ ಮೂವತ್ತೆರಡು (32) ದರಪಟ್ಟಿಗಳನ್ನು ಕ್ರೋಢೀಕರಿಸಿ ಏಳು (7) ಸಂಪುಟಗಳನ್ನೊಳಗೊಂಡ ಏಕರೂಪ ದರಪಟ್ಟಿಯನ್ನು ತಯಾರಿಸುವ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಒಂದು ಸಂಪುಟ ಜಲಸಂಪನ್ಮೂಲ ಇಲಾಖೆ, ಸಣ್ಣ ನೀರಾವರಿ ಮತ್ತು ಕರ್ನಾಟಕ ವಿದ್ಯುತ್ ನಿಗಮ ನಿಯಮಿತಕ್ಕೆ (ಕೆ.ಪಿ.ಸಿ.ಎಲ್) ಗಳನ್ನು ಒಳಗೊಂಡಿರುತ್ತದೆ ಎಂದು ತಿಳಿಸಲಾಗಿದೆ.

ದಿನಾಂಕ:21/11/2020 ರಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಜಲಸಂಪನ್ಮೂಲ ಇಲಾಖೆ, ಸಣ್ಣ ನೀರಾವರಿ ಮತ್ತು ಕರ್ನಾಟಕ ವಿದ್ಯುತ್ ನಿಗಮ ನಿಯಮಿತ ದರಪಟ್ಟಿಗಳಿಗೆ ಜಲಸಂಪನ್ಮೂಲ ಇಲಾಖೆಯನ್ನು ನೋಡಲ್ ಇಲಾಖೆಯಾಗಿ ಗುರುತಿಸಿ ಶಿಫಾರಸ್ಸು ಮಾಡಲಾಗಿತ್ತು. ಅದರಂತೆ, ಜಲ ಸಂಪನ್ಮೂಲ ಇಲಾಖೆ ಸ್ಪೆಸಿಫಿಕ್ ಐಟಂಗಳ ದರಪಟ್ಟಿ ತಯಾರಿಕೆಗೆ ಬೇಕಾಗಿರುವ ಪೂರ್ವ ತಯಾರಿಯನ್ನು ಮಾಡಿಕೊಳ್ಳಲಾಗಿದೆ ಎಂದು ತಿಳಿಸಲಾಗಿದೆ.

ದಿನಾಂಕ:07/01/2021 ರಂದು ಪ್ರಧಾನ ಇಂಜಿನಿಯರ್, ಜಲಸಂಪನ್ಮೂಲ ಅಭಿವೃದ್ಧಿ ಸಂಸ್ಥೆರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಮೂರೂ ಇಲಾಖೆಗಳ ಸಿಬ್ಬಂದಿಯವರನ್ನು ಕರೆಸಿ ಸಮಾಲೋಚಿಸಿ, ಆಯಾ ಇಲಾಖೆಗೆ ಸಂಬಂಧಿಸಿದಂತೆ ಸ್ಪೆಸಿಫಿಕ್ ಐಟಂಗಳ ದರಪಟ್ಟಿ ತಯಾರಿಕೆಗೆ ಬೇಕಾಗಿರುವ ಪೂರ್ವ ತಯಾರಿಯನ್ನು ಮಾಡಿಕೊಳ್ಳಲು ಸೂಚನೆ ನೀಡಲಾಗಿರುತ್ತದೆ.

ತದನಂತರ, ಏಕರೂಪ ದರಪಟ್ಟಿಯ ಪ್ರಗತಿ ಕುರಿತು ಸರ್ಕಾರದ ಕಾರ್ಯದರ್ಶಿಗಳು, ಪಿ.ಡಬ್ಲ್ಯೂ.ಡಿ. ಇಲಾಖೆ ರವರ ಅಧ್ಯಕ್ಷತೆಯಲ್ಲಿ ದಿನಾಂಕ:14/01/2022 ರಂದು ನಡೆದ ಸಭೆಯಲ್ಲಿ ಸಂಬಂಧಿಸಿದ ಎಲ್ಲಾ ಇಲಾಖೆಗಳಿಗೂ ಸಂಬಂಧಿಸಿದಂತೆ ಆಯಾ ಇಲಾಖಾ ಸ್ಪೆಸಿಫಿಕ್ ಐಟಂಗಳ ದರ ವಿಶ್ಲೇಷಣೆಯನ್ನು ಏಕರೂಪ ದರಪಟ್ಟಿ ಸಮಿತಿಯ ಶಿಫಾರಸ್ಸಿನನ್ವಯ ಸಿದ್ಧಪಡಿಸಲು ಅಗತ್ಯ ಕ್ರಮ ಕೈಗೊಳ್ಳಲು ಸೂಚಿಸಿರುತ್ತಾರೆ. ಹಾಗೂ ಆಯಾ ಇಲಾಖೆಗಳು ಕರಡನ್ನು ಇಲಾಖಾ ಅಂತರ್ಜಾಲದಲ್ಲಿ ಪ್ರಕಟಿಸಿ ಸ್ಟೇಕ್ ಹೋಲ್ಡರ್‌ಗಳಿಂದ ಅಭಿಪ್ರಾಯಗಳನ್ನು ಪಡೆದು, ಸಕ್ಷಮ ಪ್ರಾಧಿಕಾರದಿಂದ ಕರಡು ದರಪಟ್ಟಿಗೆ ಅನುಮೋದನೆ ಪಡೆದು ಸರ್ಕಾರಕ್ಕೆ ಮುಂದಿನ ಕ್ರಮಕ್ಕಾಗಿ ಸಲ್ಲಿಸಲು ಸೂಚನೆ ನೀಡಲಾಗಿರುತ್ತದೆ. ಇದು ಜಲ ಸಂಪನ್ಮೂಲ ಇಲಾಖಾ ಕಾಮಗಾರಿಗಳಿಗಾಗಿ ಏಕರೂಪ ದರಪಟ್ಟಿಯಲ್ಲಿ ಭಾಗವಾಗಿ ಸೇರ್ಪಡೆಗೊಳ್ಳುವ ಪ್ರಸ್ತಾವನೆ ಇರುತ್ತದೆ.

ಮೇಲ್ಕಂಡಂತೆ ಆಗಿರುವ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಜಲಸಂಪನ್ಮೂಲ ಇಲಾಖೆಯ ಸ್ಪೆಸಿಫಿಕ್ ಐಟಂಗಳನ್ನೊಳಗೊಂಡ ದರಪಟ್ಟಿ ಅಂತಿಮಗೊಳಿಸುವ ಕುರಿತು ಮುಂದಿನ ಕ್ರಮ ತೆಗೆದುಕೊಳ್ಳಲು ಸಮಿತಿಯನ್ನು ರಚಿಸುವಂತೆ ಕೋರಿರುತ್ತಾರೆ.

ಅದರಂತೆ ಪ್ರಸ್ತಾವನೆಯಲ್ಲಿನ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಗಿನಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಇ-ಸಂಖ್ಯೆ:ಜಸಂಇ 43 ಕೆಬಿಎನ್ 2022, ಬೆಂಗಳೂರು ದಿನಾಂಕ:18/02/2022**

ಏಕರೂಪ ದರಪಟ್ಟಿಯ ಭಾಗವಾಗಿ ಜಲ ಸಂಪನ್ಮೂಲ ಇಲಾಖೆಯ 2021-22ನೇ ಸಾಲಿನ ದರಪಟ್ಟಿಯನ್ನು ಪರಿಷ್ಕರಿಸಲು ಈ ಕೆಳಕಂಡಂತೆ ಸಮಿತಿಯನ್ನು ರಚಿಸಿ ಆದೇಶಿಸಲಾಗಿದೆ

| | | |
|---|---|---|
| 1 | ಕಾರ್ಯದರ್ಶಿಗಳು, ಜಲಸಂಪನ್ಮೂಲ ಇಲಾಖೆ, ಬೆಂಗಳೂರು | ಅಧ್ಯಕ್ಷರು |
| 2 | ಪ್ರಧಾನ ಇಂಜಿನಿಯರ್, ಜಲಸಂಪನ್ಮೂಲ ಅಭಿವೃದ್ಧಿ ಸಂಸ್ಥೆ, ಬೆಂಗಳೂರು | ಸದಸ್ಯ ಕಾರ್ಯದರ್ಶಿ |
| 3 | ಶ್ರೀ ಸಿ.ಅನಂತರಾಮು, ಮುಖ್ಯ ಇಂಜಿನಿಯರ್ (ನಿವೃತ್ತ) ಜಲಸಂಪನ್ಮೂಲ ಇಲಾಖೆ ಮತ್ತು ಸದಸ್ಯರು, ತಾಂತ್ರಿಕ ಕಾರ್ಯನಿರತ ತಂಡ, ಏಕರೂಪ ದರಪಟ್ಟಿ ಸಮಿತಿ | ಸದಸ್ಯರು |
| 4 | ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ, ಬೆಂಗಳೂರು | ಸದಸ್ಯರು |
| 5 | ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು | ಸದಸ್ಯರು |
| 6 | ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಬೆಂಗಳೂರು | ಸದಸ್ಯರು |
| 7 | ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ, ಬೆಂಗಳೂರು | ಸದಸ್ಯರು |

| | | |
|---|---|---|
| 8 | ಉಪ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ಪಿ.ಡಬ್ಲ್ಯೂ.ಡಿ-ಆರ್ಥಿಕ ಕೋಶ, ಬೆಂಗಳೂರು | ಸದಸ್ಯರು |
| 9 | ಹೆಚ್ಚುವರಿ ಆಯುಕ್ತರು, ವಾಣಿಜ್ಯ ತೆರಿಗೆ ಇಲಾಖೆ, ಬೆಂಗಳೂರು | ಸದಸ್ಯರು |
| 10 | ಮುಖ್ಯ ಇಂಜಿನಿಯರ್, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ, ಆಲಮಟ್ಟಿ | ಸದಸ್ಯರು |
| 11 | ಮುಖ್ಯ ಇಂಜಿನಿಯರ್, ಕಾವೇರಿ ನೀರಾವರಿ ನಿಗಮ ನಿಯಮಿತ, ಮೈಸೂರು | ಸದಸ್ಯರು |
| 12 | ಮುಖ್ಯ ಇಂಜಿನಿಯರ್, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ, ತುಮಕೂರು. | ಸದಸ್ಯರು |
| 13 | ನಿರ್ದೇಶಕರು, ಕಾಡಾ, ಬೆಂಗಳೂರು | ಸದಸ್ಯರು |
| 14 | ಮುಖ್ಯ ಇಂಜಿನಿಯರ್, ಕರ್ನಾಟಕ ನೀರಾವರಿ ನಿಗಮ ನಿಯಮಿತ, ನೀರಾವರಿ ಕೇಂದ್ರ ವಲಯ, ಮುನಿರಾಬಾದ್. | ಸದಸ್ಯರು |
| 15 | ಮುಖ್ಯ ಇಂಜಿನಿಯರ್ ಕರ್ನಾಟಕ ನೀರಾವರಿ ನಿಗಮ ನಿಯಮಿತ, ನೀರಾವರಿ ಯೋಜನಾ ವಲಯ, ಕಲಬುರಗಿ. | ಸದಸ್ಯರು |
| 16 | ಜಂಟಿ ಕಾರ್ಮಿಕ ಆಯುಕ್ತರು, ಕನಿಷ್ಠ ವೇತನ ಮತ್ತು ಬಾಲ ಕಾರ್ಮಿಕ, ಕಾರ್ಮಿಕ ಇಲಾಖೆ, ಬೆಂಗಳೂರು | ವಿಶೇಷ ಆಹ್ವಾನಿತರು |

ಸದರಿ ಸಮಿತಿಯು ಏಕರೂಪ ಪರಿಷ್ಕೃತ ದರಪಟ್ಟಿಯನ್ನು ತಯಾರಿಸುವಾಗ ವಿವಿಧ ಐಟಂಗಳಿಗೆ ಅನ್ವಯಿಸುವ ಸಾಮಗ್ರಿಗಳಾದ ಸಿಮೆಂಟ್, ಸ್ಟೀಲ್, ಡೀಸೆಲ್ ಸಾಮಗ್ರಿಗಳ ದರಗಳನ್ನು ಮತ್ತು ದಿನಾಂಕ:01/07/2017 ರಿಂದ ಜಿ.ಎಸ್.ಟಿ. ಜಾರಿಗೆ ಬಂದಿರುವುದರಿಂದ, ಅನ್ವಯಿಸುವ ಜಿ.ಎಸ್.ಟಿ. ಪರಿಗಣಿಸುವುದು ಹಾಗೂ ಕಾರ್ಮಿಕ ಇಲಾಖೆಯಿಂದ ಕಾರ್ಮಿಕ ದಿನಗೂಲಿ ದರಗಳು ಪ್ರಕಟವಾದ ನಂತರ, ಕರಡು ದರಪಟ್ಟಿಯನ್ನು ಸಿದ್ಧಪಡಿಸಿ ಸೂಕ್ತ ಶಿಫಾರಸ್ಸಿನೊಂದಿಗೆ ಸರ್ಕಾರಕ್ಕೆ ಮೂರು (3) ತಿಂಗಳ ಒಳಗಾಗಿ 2021-22ನೇ ಸಾಲಿಗೆ ಅನ್ವಯವಾಗುವ ದರಪಟ್ಟಿಯನ್ನು ವರದಿಯೊಂದಿಗೆ ಸಲ್ಲಿಸುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

18/2/2022
(ರವೀಂದ್ರ ಕೊಂಡ)
ಸರ್ಕಾರದ ಅಧೀನ ಕಾರ್ಯದರ್ಶಿ (ತಾಂತ್ರಿಕ-5)
ಜಲ ಸಂಪನ್ಮೂಲ ಇಲಾಖೆ.

**ಪ್ರತಿಯನ್ನು:**

1. ಮಹಾಲೇಖಪಾಲರು ( ಎ & ಇ), ಕರ್ನಾಟಕ, ಬೆಂಗಳೂರು.
2. ಮಾನ್ಯ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿಗಳು, ವಿಧಾನ ಸೌಧ.
3. ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ, ಬೆಂಗಳೂರು.
4. ವ್ಯವಸ್ಥಾಪಕ ನಿರ್ದೇಶಕರು,ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು.
5. ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಬೆಂಗಳೂರು.
6. ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ, ಬೆಂಗಳೂರು.
7. ಮಾನ್ಯ ಜಲ ಸಂಪನ್ಮೂಲ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ.

8. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ಜಲಸಂಪನ್ಮೂಲ ಇಲಾಖೆ, ಬೆಂಗಳೂರ.
9. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ಜಲಸಂಪನ್ಮೂಲ ಇಲಾಖೆ, ಬೆಂಗಳೂರ.
10. ಹೆಚ್ಚುವರಿ ಕಾರ್ಯದರ್ಶಿಗಳ ಆಪ್ತ ಸಹಾಯಕರು, ಜಲಸಂಪನ್ಮೂಲ ಇಲಾಖೆ, ಬೆಂಗಳೂರ.
1. ಪ್ರಧಾನ ಇಂಜಿನಿಯರ್, ಜಲ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆ, ಬೆಂಗಳೂರು.
12. ಹೆಚ್ಚುವರಿ ಆಯುಕ್ತರು, ವಾಣಿಜ್ಯ ತೆರಿಗೆ ಇಲಾಖೆ, ಬೆಂಗಳೂರು.
13. ಸರ್ಕಾರದ ಉಪ ಕಾರ್ಯದರ್ಶಿ (ಕೃಭಾಜನಿ) ರವರ ಆಪ್ತ ಸಹಾಯಕರು, ಜಲಸಂಪನ್ಮೂಲ ಇಲಾಖೆ, ಬೆಂಗಳೂರ.
14. ಸಂಬಂಧಪಟ್ಟ ಎಲ್ಲಾ ಸದಸ್ಯರುಗಳಿಗೆ (ಅಧೀಕ್ಷಕ ಅಭಿಯಂತರರು, ಯೋಜನೆ ಮತ್ತು ತನಿಖಾ ಘಟಕ, ಜಲ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆ ರವರ ಮೂಲಕ)
15. ವಿಶೇಷ ಕರ್ತವ್ಯಾಧಿಕಾರಿ (ತಾಂತ್ರಿಕ-3), ಜ.ಸಂ. ಇಲಾಖೆ.
16. ಸರ್ಕಾರದ ಅಧೀನ ಕಾರ್ಯದರ್ಶಿ (ತಾಂತ್ರಿಕ-1)/ (ತಾಂತ್ರಿಕ-2) / (ತಾಂತ್ರಿಕ-4) / (ಕಾಡಾ), ಜ.ಸಂ. ಇಲಾಖೆ.
17. ತಾಂತ್ರಿಕ ಸಹಾಯಕರು (ತಾಂತ್ರಿಕ-6)/(ತಾಂತ್ರಿಕ-7), ಜ.ಸಂ. ಇಲಾಖೆ.
18. ಶಾಖಾ ರಕ್ಷಕ ಕಡತ / ಹೆಚ್ಚುವರಿ ಪ್ರತಿಗಳು.